ನಿತ್ಯ ಬಳಸುವಂತಹ ವಸ್ತುಗಳಿಂದ ಇಂತಹ ಕೆಲವು ಉತ್ಪನ್ನಗಳನ್ನು ನೀವೂ ತಯಾರಿಸಿಕೊಳ್ಳಬಹುದು. ಮಿಶ್ರಣ ತಯಾರಿಸುವಾಗ ಆದಷ್ಟು ಲೋಹ ಅಥವಾ ಪ್ಲಾಸ್ಟಿಕ್ ಪಾತ್ರೆಗಳ ಬದಲು ಮರದ ಪಾತ್ರೆ, ಚಮಚ ಬಳಸಿದರೆ ಉತ್ತಮ ಫಲಿತಾಂಶ ಪಡೆಯಬಹುದು. ಆಗ ಅದು ಸಂಪೂರ್ಣ ರಾಸಾಯನಿಕ ಮುಕ್ತವಾಗಿರುತ್ತದೆ.

## ಕಪ್ಪು ಚುಕ್ಕೆಗಳಿಗೆ ಮಾಸ್ಕ್

ಅಂದದ ಮೊಗದ ಸೌಂದರ್ಯಕ್ಕೆ ಕಪ್ಪು ಚುಕ್ಕೆ ಈ ಬ್ಲ್ಯಾಕ್ ಹೆಡ್. ಇದರ ನಿವಾರಣೆಗೆ ರೆಸಿಪಿಯನ್ನು ನೀವೇ ತಯಾರಿಸಿಕೊಳ್ಳಬಹುದು. ಅದೂ ಅತ್ಯಂತ ಕಡಿಮೆ ಖರ್ಚಿನಲ್ಲಿ, ಕಡಿಮೆ ಸಮಯದಲ್ಲಿ. 2 ಚಮಚ ನಯವಾದ ಇದ್ದಿಲಿನ ಪುಡಿ, ಅರ್ಧ ಚಮಚ ಮುಲ್ತಾನಿ ಮಣ್ಣು ಅಥವಾ ಬೆಂಟೋನೈಟ್ ಮಣ್ಣು (ಮಡಿಕೆಯಿಂದ ಮಾಡುವ ಕಲಾಕೃತಿಗಳಿಗೆ ಹೊಳಪು ಬರಲು, ಸುಲಭವಾಗಿ ಒಡೆಯದಿರಲು ಬಳಸಲಾಗುವುದು), ಅರ್ಧ ಚಮಚ ನೀರು. ಇದನ್ನು ಚೆನ್ನಾಗಿ ಕಲೆಸಿ ಮಿಶ್ರಣ ತಯಾರಿಸಿಕೊಳ್ಳಿ. ಮುಖವನ್ನು ಸ್ವಚ್ಛವಾಗಿ ತೊಳೆದು, ಒರೆಸಿದ ನಂತರ ಈ ಮಿಶ್ರಣವನ್ನು ಕಣ್ಣು ಮತ್ತು ತುಟಿಯ ಸುತ್ತ ತ್ವಚೆ ಬಿಟ್ಟು ಉಳಿದ ಕಡೆ ಲೇಪಿಸಿ. ಹತ್ತು ನಿಮಿಷ ಬಿಟ್ಟು ತಣ್ಣೀರಿನಿಂದ ಮುಖ ತೊಳೆಯಿರಿ. ಇದನ್ನು ಆರಂಭದಲ್ಲಿ ವಾರಕ್ಕೊಮ್ಮೆ ಮಾಡಿದರೆ ಕಪ್ಪು ಚುಕ್ಕೆಯಿಲ್ಲದ ಸೊಗಸಿನ ತ್ವಚೆ ನಿಮ್ಮದಾಗಬಹುದು.

## ಸುಕ್ಕು ನಿವಾರಣೆಗೆ

ಕಾಫಿ ಪುಡಿ, ಬೆಂಟೋನೈಟ್ ಮಣ್ಣು ಹಾಗೂ ಕೊಕೊವಾ ಪುಡಿಗೆ ಸ್ವಲ್ಪ ನೀರು ಸೇರಿಸಿ ಹದವಾದ ಮಿಶ್ರಣ ತಯಾರಿಸಿಕೊಳ್ಳಿ. 15–20 ನಿಮಿಷ ಬಿಟ್ಟು ನಿಧಾನವಾಗಿ ವೃತ್ತಾಕಾರವಾಗಿ ಉಜ್ಜಿ. ಇದರಿಂದ ತ್ವಚೆಯ ಮೇಲ್ಪದರದ ಸತ್ತ ಜೀವಕೋಶಗಳೂ ಉದುರುತ್ತವೆ. ನಂತರ ನೀರಿನಿಂದ ತೊಳೆದುಕೊಳ್ಳಿ. ತಕ್ಷಣ ಮುಖಕ್ಕೆ ಯಾವುದೇ ಲೋಷನ್ ಅಥವಾ ಕ್ರೀಮ್ ಹಚ್ಚದೆ ತ್ವಚೆಯ ಜೀವಕೋಶಗಳಿಗೆ ಉಸಿರಾಡಲು ಅವಕಾಶ ನೀಡಿ.

## ಮೊಡವೆಗಳಿಗೆ

ಎರಡು ಚಮಚ ಓಟ್ಸ್ ಪುಡಿ, ಅರ್ಧ ಚಮಚ ಲಿಂಬೆ ಹಣ್ಣಿನ ರಸ, 2 ಚಮಚ ಜೇನುತುಪ್ಪ, 4–5 ಹನಿ ಟೀ ಟ್ರೀ ತೈಲ ಮಿಶ್ರ ಮಾಡಿ ಮುಖಕ್ಕೆ ಹಚ್ಚಿಕೊಂಡು 15–20 ನಿಮಿಷ ಬಿಟ್ಟು ತೊಳೆದರೆ ಮೊಡವೆ ತಹಬಂದಿಗೆ ಬರುತ್ತದೆ.



ಈ ಮಾಸ್ಕ್‌ಗಳನ್ನು ತಾಜಾ ತಯಾರಿಸಿ ಬಳಸಿದರೆ ಕ್ಷೇಮ. ಇನ್ನು ಮೇಕಪ್‌ಗೆ ನಿಮಗೆ ಬಿಡುವಿದ್ದಾಗ ತಯಾರಿಸಿ ಸಂಗ್ರಹಿಸಿಟ್ಟುಕೊಳ್ಳಬಹುದು ಎನ್ನುತ್ತಾರೆ ಗೀತಾ.

## ಸಾದಾ ಮೇಕಪ್‌ಗೆ

ಒಂದು ಚಮಚ ಲೋಳೆಸರ, 2–3 ಹನಿ ಬಾದಾಮಿ ತೈಲ, 2 ಚಮಚ ನೀರು. ಇದನ್ನು ಚೆನ್ನಾಗಿ ಮಿಶ್ರ ಮಾಡಿಟ್ಟು ಫ್ರಿಜ್‌ನಲ್ಲಿ ಇಟ್ಟುಕೊಂಡರೆ 2–3 ವಾರ ಬಳಸಬಹುದು. ಮುಖಕ್ಕೆ ಹಚ್ಚಿಕೊಂಡ ನಂತರ ಒಣಗುವವರೆಗೆ ಬಿಟ್ಟು, ನಂತರ ಪೌಡರ್ ಲೇಪಿಸಬಹುದು.

ಮುಖದ ಕಾಂತಿಗೆ: ಆ್ಯರೊರೂಟ್ ಪುಡಿ, ಕೊಕೊವಾ ಪುಡಿ, ದಾಲ್ಚಿನ್ನಿ ಪುಡಿ ಹಾಗೂ ಜಾಯಿಕಾಯಿ ಪುಡಿ ತಲಾ ಒಂದು ಚಮಚ ಮಿಶ್ರ ಮಾಡಿಟ್ಟುಕೊಂಡು ಮುಖಕ್ಕೆ ಲೇಪಿಸಿಕೊಂಡರೆ ಫೇಸ್ ಪೌಡರ್‌ಗೆ ಪರ್ಯಾಯವಾಗಿ ಬಳಸಬಹುದು.

ಫೌಂಡೇಶನ್: ಒಂದು ಚಮಚ ಆ್ಯರೊರೂಟ್ ಪುಡಿಗೆ ನಿಮ್ಮ ತ್ವಚೆಯ ವರ್ಣಕ್ಕೆ ತಕ್ಕಂತೆ ಕೊಕೊವಾ, ದಾಲ್ಚಿನ್ನಿ ಹಾಗೂ ಜಾಯಿಕಾಯಿ ಪುಡಿ ಮಿಶ್ರ ಮಾಡಿ. ಇದಕ್ಕೆ ಬಾದಾಮಿ ಅಥವಾ ಆಲಿವ್ ಎಣ್ಣೆ ಸೇರಿಸಿ ಮಂದವಾದ ಮಿಶ್ರಣ ಮಾಡಿಟ್ಟುಕೊಳ್ಳಿ. ಮುಖಕ್ಕೆ ತೆಳ್ಳಗೆ ಲೇಪಿಸಿಕೊಂಡರೆ ಹೆಚ್ಚು ನೈಸರ್ಗಿಕವಾಗಿ ಕಾಣುತ್ತದೆ.

ಲಿಪ್‌ಗ್ಲಾಸ್: ಕಾಲು ಕಪ್ ಜೇನು ಮೇಣ ಕರಗಿಸಿ. ಇದಕ್ಕೆ ಕಾಲು ಕಪ್ ಹರಳೆಣ್ಣೆ ಸೇರಿಸಿ. ಎಷ್ಟು ದಟ್ಟ ಬಣ್ಣ ಬೇಕೋ ಅಷ್ಟು ಬೀಟ್‌ರೂಟ್ ರಸ ಮಿಶ್ರ ಮಾಡಿ ಗಟ್ಟಿ ಮುಚ್ಚಳ ಇರುವ ಬಾಟಲ್‌ಗೆ ರವಾನಿಸಿ. ಇದನ್ನು ದೀರ್ಘಕಾಲ ಬಳಸಬಹುದು.

ಕಣ್ಣ ಸುತ್ತಲಿನ ನಿರಿಗೆಗೆ: ಜೈವಿಕ ಸ್ಟ್ರಾಬೆರಿ ಜ್ಯಾಮ್ ಅನ್ನು ಕಣ್ಣ ಸುತ್ತ ಸವರಿಕೊಂಡು 10 ನಿಮಿಷ ಬಿಟ್ಟು ಒರೆಸಿ ಹಾಕಬಹುದು. ಆದರೆ ಹಚ್ಚುವಾಗ ಕಣ್ಣೊಳಗೆ ಇಳಿಯದಂತೆ ಎಚ್ಚರಿಕೆ ವಹಿಸಿ.

## ಶಾಂಪೂ

ಅರ್ಧ ಲೀಟರ್ ಆ್ಯಪಲ್ ಸಿಡಾರ್ ವಿನೇಗರ್ ಅನ್ನು ದೊಡ್ಡ ಪಾತ್ರೆಗೆ ಹಾಕೊಳ್ಳಿ. ದಾಸವಾಳ ಎಲೆ ಅಥವಾ ಒಣಗಿದ ಹೂವಿನ ಪುಡಿಯನ್ನು ಬಟ್ಟೆಯಲ್ಲಿ ಕಟ್ಟಿ ಅದ್ದಿ ಅಥವಾ ದಾಸವಾಳ ಟೀ ಪುಡಿ ಬ್ಯಾಗ್ ಲಭ್ಯವಿದ್ದರೆ ಅದನ್ನು ವಿನೇಗರ್‌ನಲ್ಲಿ ಅದ್ದಿ. ಒಂದು ವಾರ ಸ್ವಲ್ಪ ಬಿಸಿಲು ಬೀಳುವಲ್ಲಿ ಹಾಗೇ ಬಿಡಿ. ನೂರು ಎಂ.ಎಲ್. ನೀರಿಗೆ ಒಂದು ಚಮಚ ಈ ಮಿಶ್ರಣ ಸೇರಿಸಿ ಶಾಂಪೂ ತರಹ ತಲೆಗೂದಲು ತೊಳೆಯಬಹುದು. ವಿನೇಗರ್ ಹೊಟ್ಟನ್ನು ಕೂಡಾ ನಿವಾರಿಸುತ್ತದೆ.

## ಕಂಡೀಷನರ್

ಎರಡು ಕಪ್ ಫಿಲ್ಟರ್ ಆದ ನೀರನ್ನು ಕುದಿಸಿ. ಇದಕ್ಕೆ ಒಂದು ಹಿಡಿ ಪುದೀನಾ ಎಲೆ ಹಾಕಿ. ತಣ್ಣಗಾದ ನಂತರ ಪುದೀನಾ ಎಲೆಯನ್ನು ತೆಗೆದು ಇದಕ್ಕೆ ಒಂದೆರಡು ಹನಿ ಲ್ಯಾವೆಂಡರ್ ತೈಲ ಸೇರಿಸಿ.

ಕಪ್ಪು ಕಾಡಿಗೆ: ಎರಡು ಚಮಚ ತೆಂಗಿನ ಎಣ್ಣೆ, 4 ಚಮಚ ಲೋಳೆಸರ, ಒಂದು ಚಮಚ ತುರಿದ ಜೇನು ಮೇಣ ಸೇರಿಸಿ ಬಿಸಿ ಮಾಡಿ. ಇದಕ್ಕೆ ಎರಡು ಚಮಚ ನಯವಾದ ಇದ್ದಿಲು ಪುಡಿ ಅಥವಾ ಕೊಕೊವಾ ಪುಡಿ ಸೇರಿಸಿ. ಖಾಲಿ ಬಾಟಲ್‌ನಲ್ಲಿ ತುಂಬಿಟ್ಟುಕೊಂಡರೆ ಮಸ್ಕಾರಾದಂತೆ ಬಳಸಬಹುದು.

ಇವು ನೂರಕ್ಕೆ ನೂರರಷ್ಟು ನೈಸರ್ಗಿಕವಾಗಿದ್ದರೂ ನಿಮ್ಮ ತ್ವಚೆಯ ಮೇಲೆ ಅಡ್ಡ ಪರಿಣಾಮ ಬೀರಬಹುದು ಎಂಬ ಭಯವಿದ್ದರೆ ಮಣಿಕಟ್ಟಿನ ಒಳಭಾಗಕ್ಕೆ ಲೇಪಿಸಿ ಕೆಲವು ಹೊತ್ತು ಬಿಡಿ. ಯಾವುದೇ ತೊಂದರೆ ಕಂಡು ಬರದಿದ್ದರೆ ಮುಖಕ್ಕೆ ಬಳಸಬಹುದು. ■